ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1255/2016

ಚಾಸಾ:4 ಪ್ರಾಸಾ:3

ದಿನಾಂಕ: 04.09.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಪ್ರೀತಿ ಫೆರ್ನಾಂಡಿಸ್ |
| ಗಂಡನ ಹೆಸರು | : | ಜಾರ್ಜ್ ಫೆರ್ನಾಂಡಿಸ್ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಗಂಗೊಳ್ಳಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ದಿ: 05-07-2015 ರಂದು ಚರ್ಚ್ ನಲ್ಲಿ ಸಭೆ ಇದ್ದು, ಆಗ ನನ್ನೊಂದಿಗೆ ಚಾಸಾ-6ರವರು ಇದ್ದರು. ನಾನು ಸಭೆಯ ಕಾರ್ಯದರ್ಶಿಯಾಗಿದ್ದೆ. ಚಾಸಾ-2ರವರು ಪಂಚಾಯಿತಿಯ ಸದಸ್ಯರಾಗಿದ್ದರು. ಆಗ ಚಾಸಾ-2ರವರು ಪ್ರಾಸಾ-1ರವರನ್ನು ಕರೆದುಕೊಂಡು ಬಂದು ವಿಚಾರ ಮಾತನಾಡಬೇಕೆಂದು ಹೇಳಿದಾಗ ನಾವು ಏನು ಎಂದು ಕೇಳಲಾಗಿ ಪ್ರಾಸಾ-1ರವರು ದಿ: 26-06-2015 ರಂದು ಪಂಚಾಯಿತಿಗೆ ಹೋದಾಗ ಆರೋಪಿ ಉಗ್ರಾಣಿಯಾಗಿ ಕೆಲಸ ಮಾಡುತ್ತಿದ್ದು, ಆತ ಆಧಾರ್ ಕಾರ್ಡು, ರೇಷನ್ ಕಾರ್ಡು ಮಾಡಿಕೊಡುತ್ತೇನೆ ಎಂದು ಕರೆದು ಪ್ರಾಸಾ-1ರವರಿಗೆ ಅಶ್ಲೀಲವಾಗಿ ವರ್ತಿಸಿ ವೀಡಿಯೋ ತೋರಿಸುವುದಾಗಿ ಹೇಳಿ ಆಕೆ ಅದೇ ವಿಚಾರವಾಗಿ ಅಳಲು ಶುರು ಮಾಡಿದ್ದು, ನಾವು ಆಕೆಯನ್ನು ಸಮಾಧಾನ ಪಡಿಸಿ ದೂರು ದಾಖಲಿಸುವಂತೆ ನಿರ್ದೇಶಿಸಿರುತ್ತೇವೆ. ಅದೇ ರೀತಿ ಪ್ರಾಸಾ-1ರವರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ಆ ಕುರಿತಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದ:</u>**

ಪ್ರಾಸಾ-1ರವರು ಹೇಳಿದ ನಂತರ ಮಾತ್ರ ತೊಂದರೆ ನೀಡಿದ ಬಗ್ಗೆ ನನಗೆ ತಿಳಿದಿರುತ್ತದೆ. ಅದರ ವೈಯಕ್ತಿಕ ಮಾಹಿತಿ ಇಲ್ಲ. ಪ್ರಾಸಾ-1ರವರು ನಮ್ಮ ಜಾತಿ, ಚರ್ಚ್ ನವರು. ಮೇಲೆ ಹೇಳಿದ ವಿಚಾರವನ್ನು ನಮ್ಮ ಚರ್ಚ್ ಸಭೆಯಲ್ಲಿ ಪ್ರಾಸಾ-1ರವರು ತಿಳಿಸಿರುತ್ತಾರೆ. ಆರೋಪಿ ಕ್ರಿಶ್ಚಿಯನ್ ಅಲ್ಲ. ಪ್ರಾಸಾ-1ರವರಿಗೆ ದೂರು ದಾಖಲಿಸುವಂತೆ ಮಾತ್ರ ಸಲಹೆ ನೀಡಿರುತ್ತೇವೆ. ಯಾವುದೇ ಅಶ್ಲೀಲ ಚಿತ್ರದ ಬಗ್ಗೆ ನಾನೇನು ನೋಡಿರುವುದಿಲ್ಲ. ಪ್ರಾಸಾ-1ರವರು ಹೇಳಿದ ವಿಚಾರ ಸತ್ಯ ಅಥವಾ ಸುಳ್ಳು ಎಂದು ನನಗೆ ತಿಳಿದಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**